ESI.A.No. 27–19

AW–1,

ದಿನಾಂಕಃ 19–07–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ– ಎದುರುದಾರರ ಪರವಾಗಿಃ ಶ್ರೀ. ಎ ಬಿ ಎನ್ ವಕೀಲರಿಂದ ಃ

ನಮ್ಮ ಸಂಸ್ಥೆಯನ್ನು ಎದುರುದಾರರು ತಪಾಸಣೆ ಮಾಡಿರುತ್ತಾರೆ ಎಂದರೆ ಸರಿ . ಆಗಸ್ಟ್ 2015 ರಲ್ಲಿ ನಮ್ಮ ಸಂಸ್ಥೆಯಲ್ಲಿ 10 ಜನ ಕೆಲಸಗಾರರು ಇದ್ದರು ಎಂದರೆ ಸರಿಯಲ್ಲ . ತಪಾಸಣೆ ಮಾಡಿದ ನಂತರ ನಮ್ಮ ಸಂಸ್ಥೆಗೆ ಇ.ಎಸ್.ಐ. ಕೋಡ್ ನ್ನು ನೀಡಲಾಗಿರುತ್ತದೆ ಎಂದರೆ ಸರಿ . ಕೋಡನ್ನು ನೀಡಿದ ನಂತರ ಎದುರುದಾರರು ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವ ನೌಕರರ Wage Register, Attendance Register ಮತ್ತು ಇತರ ದಾಖಲಾತಿಗಳನ್ನು ನಿರ್ವಹಿಸಬೇಕು ಎಂದು ತಿಳಿಸಿರುತ್ತಾರೆ ಎಂದರೆ ಸರಿ . 01.01.2017 ರಿಂದ 31.08.2018 ರವರೆಗೆ ವಂತಿಗೆಯನ್ನು ಕಟ್ಟದೇ ಇದ್ದುದರಿಂದ ಎದುರುದಾರರು ಸಿ–18 ನೋಟೀಸ್ ನ್ನು ನೀಡಿರುತ್ತಾರೆ ಎಂದರೆ ಸರಿ . ಸದರಿ ನೋಟೀಸ್ ನಲ್ಲಿ ಹೇಳಿದಂತೆ ಖುದ್ದು ಸುನಾವಣೆ ಗೆ ನಾನು ಹಾಜರಾಗಿರುವುದಿಲ್ಲ ಎಂದರೆ ಸರಿ . ನಾನು ಖುದ್ದು ಸುನಾವಣೆ ಗೆ ಹಾಜರಾಗಿ ದಾಖಲಾತಿಗಳನ್ನು ನೀಡದೇ ಇದ್ದುದರಿಂದ ಎದುರುದಾರರು 1,50,150/– ರೂಪಾಯಿಗಳನ್ನು ಅಡಾಕ್ ಬೇಸಿಸ್ ಮೇಲೆ ಲೆಕ್ಕ ಹಾಕಿ ಸೆಕ್ಸ್ ನ್ 45– ಎ ಅಡಿಯಲ್ಲಿ ಆದೇಶವನ್ನು ಹೊರಡಿಸಿರುತ್ತಾರೆ ಎಂದರೆ ಸರಿ . ಸದರಿ ಆದೇಶವನ್ನು ಪ್ರಶ್ನಿಸಿ ಸೆಕ್ಸನ್ 45–ಎ ಎ ಅಡಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ . ನಂತರ 2017 ರಲ್ಲಿ ಕಟ್ಟಬೇಕಾಂದಂತಹ ವಂತಿಗೆಯನ್ನು ನಾನು 2018 ರಲ್ಲಿ ಕಟ್ಟಿರುತ್ತೇನೆ ಎಂದರೆ ಸರಿ . ನಿ ಎ –4 ಚಲನ್ ನ್ನು ಯಾವುದೇ ಆಧಾರವಿಲ್ಲದೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ . ನಮ್ಮ ಸಂಸ್ಥೆಯ Balance Sheet and Profit and Loss Account ಇರುತ್ತದೆ. ಅದನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ, ನಿ ಎ–2 ಮತ್ತು 3 ನ್ನು ಈ ಪ್ರಕರಣಕ್ಕೆ ಅನುಗುಣವಾಗಿ ಸೃಷ್ಟಿಸಿರುವ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ . ನಾನು ಪೂರಕ ದಾಖಲಾತಿಗಳನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸದೇ ಇದ್ದುದರಿಂದ ಎದುರುದಾರರು ಆದೇಶಿಸಿದ ವಂತಿಗೆಯು ಸರಿಯಾಗಿರುತ್ತದೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ.ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.